ಗಾಳಿಯಲ್ಲಿ ತೇಲಿಸುತ್ತಾ ಕಾಫಿಯನ್ನು ತುಟಿಗೆ ಮುಟ್ಟಿಸುತ್ತಿರುವಂತೆ ಕಂಡು ಈತನೇನಾದರೂ ಬ್ಲ್ಯಾಕ್ ಮ್ಯಾಜಿಕ್ ಮಾಡುವವನೇ ಎಂದನಿಸಿತು, ಆಂಡ್ರಿಯಾಳಿಗೆ. ಇಂಡಿಯನ್ನರು ಬ್ಲ್ಯಾಕ್ ಮ್ಯಾಜಿಕ್‌ಗೆ ಹೆಸರುವಾಸಿ ಎಂದು ಕೇಳಿದ್ದೇನೆ... ಜೀಸಸ್...

ನೋಡ ನೋಡುತ್ತಿದ್ದಂತೆ ಆತ ಎದ್ದು ವ್ಯಾಕ್ಯೂಮ್ ಕ್ಲೀನರ್‌ನ ಪೈಪನ್ನು ಜೋಡಿಸಿ ತಾನು ಕೂತಿದ್ದ ಸೋಫಾವನ್ನು ಶುಚಿಗೊಳಿಸಿ ವಾಶ್‌ರೂಮಿಗೆ ಹೋಗಿ ಮುಖಕ್ಕೆ ನೀರು ಹಾಕಿಕೊಂಡು ಸೀದಾ ಮೈನ್ ಡೋರನ್ನು ತೆರೆದು ಹೊರ ಹೋಗುತ್ತಾ ಆಂಡ್ರಿಯಾಳನ್ನು ನೋಡಿ 'ವರಟ್ಟೆ' ಎಂದು ಹೇಳಿ ಹೊರಟುಹೋದ. ಆಂಡ್ರಿಯಾಳಿಗೆ ನಡೆಯುತ್ತಿರುವುದೆಲ್ಲವೂ ಕನಸೇ ನಿಜವೇ ಒಂದೂ ಗೊತ್ತಾಗದೇ ಗಲಿಬಿಲಿಗೊಂಡು ನಿಂತಳು.

ಸ್ನಾನ ಮಾಡಿ ಥಾಯ್ ರೆಸ್ಟೋರೆಂಟಿನಲ್ಲಿ ತಿಂಡಿ ತಿಂದು ರಸ್ತೆಗೆ ಬಂದಳು. ಸಮಯ ಬೆಳಿಗ್ಗೆ ಒಂಬತ್ತೂವರೆ! ಬೀದಿ ದೀಪಗಳು ಇರಲಿಲ್ಲವೆಂದರೆ ಸುತ್ತಲೂ ಕತ್ತಲು... ಈ ನಗರದ ಸುತ್ತ ಇರುವ ಸುಂದರ ಹಿಮಗುಡ್ಡದ ಸಾಲುಗಳನ್ನು ನೋಡಿ ಬರೋಣವೇ ಅನ್ನಿಸಿತು ಅವಳಿಗೆ. ಟ್ಯಾಕ್ಸಿಯೊಂದನ್ನು ಬುಕ್ ಮಾಡಿ ಸುಖಾಸುಮ್ಮನೆ ಕತ್ತಲಲ್ಲಿ ತಿರುಗಿ ಬರೋಣವೇ ಅಥವ ಪರ್ವತವೊಂದರ ತಪ್ಪಲಲ್ಲಿ ಮೌನವಾಗಿ ಕೂತು ಬೆಳಗೆಂಬ ರಾತ್ರಿಯನ್ನು ಸವಿಯೋಣವೇ ಅನ್ನಸಿತು. ಮೊಬೈಲ್ ಆಪ್‌ನಲ್ಲಿ ಟ್ಯಾಕ್ಸಿ ಬುಕ್ ಮಾಡಿ ಅಲ್ಲೇ ನಿಂತಳು. ಯಾವ ಟ್ಯಾಕ್ಸಿ? ಅಗೊ... ಇದೇ ಟ್ಯಾಕ್ಸಿ!

ಇಂಗ್ಲಿಷಿನಲ್ಲಿ ಟ್ಯಾಕ್ಸಿಯವನಿಗೆ ಹೇಳಿ ಕೂತಳು. ಸೀಟ್ ತಣ್ಣಗೆ ಕೊರೆಯುತ್ತಿತ್ತು.

ಎರಡೆರಡು ಥರ್ಮಲ್ ವೇರ್ ಹಾಕಿದರೂ ಚಳಿ ದೇಹವನ್ನು ಕೊರೆಯುತ್ತದೆ. ತನ್ನ ದೇಶಕ್ಕಿಂತಲೂ ಇಲ್ಲಿ ಚಳಿ ಜಾಸ್ತಿಯೇ? ಏನದು? ಆಕಾಶಕ್ಕೆ ಮುತ್ತಿಡುವಂತೆ ಚೂಪಾಗಿ ಕಾಣುತ್ತಿರುವ ಹಿಮ ಪರ್ವತ! ಅಗೋ ಮತ್ತೊಂದು ಸುಂದರ ಪರ್ವತ! ಅದೆಷ್ಟು ಮನೋಹರ ಈ ಜಾಗ! ಶಿಟ್... ಕತ್ತಲು ಕತ್ತಲು... ಬೆಳಕಿದ್ದಿದ್ದರೆ ಈ ಜಾಗ ಅದೆಷ್ಟು ಅದ್ಭುತವಾಗಿ ಕಾಣುತ್ತಿತ್ತು! ಸೂರ್ಯನ ಬೆಳಕಿಗೆ ಮಂಜು ಕರಗುತ್ತಾ ನೀರಾಗುವುದನ್ನು ನೋಡಬಹುದಿತ್ತು, ಬೇಸಿಗೆಯಲ್ಲಿ ಬಂದಿದ್ದರೆ... ಮಧ್ಯರಾತ್ರಿಯೂ ಇಲ್ಲಿ ಸೂರ್ಯನನ್ನು ಕಾಣ ಬಹುದಾಗಿತ್ತು. ಕತ್ತಲೇ ಆಗದ ದಿನಗಳನ್ನು ಕಣ್ಣು ತುಂಬಿಸಿಕೊಳ್ಳಬಹುದಾಗಿತ್ತು... ಸೂರ್ಯನ ನೋಡದೆ ಈ ಜನ ಅದ್ಹೇಗೆ ತಿಂಗಳುಗಳ ಕಾಲ ಹೀಗೆ ಕತ್ತಲಲ್ಲೇ ಇರುತ್ತಾರೊ?! ಮೈ ಗಾಡ್...

ಅರೆ! ಏನದು?! ಬೀದಿ ದೀಪವೊಂದರ ಕೆಳಗೆ!? ಓ ಹಿಮಕರಡಿ! ಅಗೋ... ಯಾರೋ ಒಬ್ಬಾತ ಅದನ್ನು ಹಿಡಿದು ಬೀದಿದೀಪಗಂಭಕ್ಕೆ ಕಟ್ಟಿ ಹಾಕಿದ... ಯಾರೂ ಕೇಳುವುದಿಲ್ಲವೇ ಇಲ್ಲಿ? ಹೀಗೆ ವನ್ಯ ಪ್ರಾಣಿಯನ್ನು ಒಬ್ಬಾತ ರಾಜಾರೋಷವಾಗಿ ಹಿಂಸಿಸುತ್ತಿದ್ದಾನೆ... ಕೇಳುವವರೇ ಇಲ್ಲವಲ್ಲ... ಪೊಲೀಸರು ಇಲ್ಲವೇ ಇಲ್ಲಿ? ಅದೇನೊ ಜಗತ್ತಿನ ಎಲ್ಲಾ ಬಗೆಯ ಬೀಜಗಳನ್ನು ಇಲ್ಲಿ ಸುರಕ್ಷಿತವಾಗಿ ಸಂರಕ್ಷಿಸಲಾಗುತ್ತದೆ ಎಂದು ಬೀಗುತ್ತಾರೆ... ಆದರೆ ವನ್ಯಜೀವಿಯೊಂದನ್ನು ಹಿಂಸಿಸುವುದನ್ನು ನೋಡಿಯೂ ನೋಡದಂತೆ ಹೋಗುತ್ತಾರೆ. ಶಿಟ್! ಫ್ಲೀಶ್ ಸ್ಟಾಪ್ ದ ಕಾ... ಮಿಸ್ಟ ... ಸ್ಟಾಪ್ ದ ಕಾ...

ಆಂಡ್ರಿಯಾ ಇಳಿದು ಓಡಿದಳು. ಸನಿಹ ಹೋದಂತೆ ಅವಳಿಗೆ ಭಯ ಮುತ್ತಿಕೊಂಡಿತು. ಹಿಮಕರಡಿಯ ಮುಖ ನೋಡಿದ್ದೇ ಬೆವತು ಹೋದಳು. ಅದನ್ನು ಕಟ್ಟಿ ಹಾಕಿದ ವ್ಯಕ್ತಿ ಎಲ್ಲೂ ಕಾಣುತ್ತಿಲ್ಲ. ತಿರುಗಿ ನೋಡಿದಳು. ಟ್ಯಾಕ್ಸಿಯವನು ಇವಳನ್ನೇ ನೋಡುತ್ತಿದ್ದ. ಅಲ್ಲಿ ಯಾವುದೇ ವಾಹನಗಳು ಬರುತ್ತಿಲ್ಲ. ಇವಳಿಗೆ ಚೂರು ಭಯವಾಗಿ ವಾಪಸ್ ಹೋಗುವ ಎಂದು ತಿರುಗಿದಾಗ ಇವಳ ಮುಂದೆ ಒಬ್ಬಾತ ನಿಂತಿದ್ದ. ಇವಳು ಭಯಬಿದ್ದು ಆತನನ್ನು ಗಮನಿಸಿದಳು! ಅರೆ! ಆ ಇಂಡಿಯನ್! ಆತ ಏನನ್ನೋ ಕೇಳಿದ. ಇವಳ ಮೈಯೆಲ್ಲಾ ರೋಮಾಂಚನಗೊಂಡು ಅವನನ್ನು ಅಪ್ಪಿಕೊಳ್ಳಬೇಕೆನಿಸಿ ಅದನ್ನು ತಡೆದು ಹಿಮಕರಡಿಯನ್ನು ತೋರಿಸಿ ಇಂಗ್ಲಿಷಿನಲ್ಲಿ ಹೇಳಿದಳು. ಆತ ಏನೊಂದೂ ಮಾತನಾಡದೆ ಕರಡಿಯ ಬಳಿ ಹೋಗಿ ಕೈಯಲ್ಲಿದ್ದ ಚೀಲದಿಂದ ಬ್ರೆಡ್ ಪೀಸುಗಳ ತೆಗೆದು ಅದಕ್ಕೆ ತಿನ್ನಿಸಿದ. ಅದರೊಂದಿಗೆಯೂ ಆತ ಮಾತನಾಡುತ್ತಿದ್ದುದ ನೋಡಿ ಆಂಡ್ರಿಯಾ ಜೋರು ನಗುವ ಸೂಸಿ ಟ್ಯಾಕ್ಸಿಯ ಕಡೆ ನಡೆದಳು. ಆತ ಆ ಹಿಮಕರಡಿಯನ್ನು ಬಿಚ್ಚಿ ಅದರ ಜೊತೆ ನಡೆಯುತ್ತಾ ಕತ್ತಲೊಳಗೆ ಕರಗಿಹೋದ. ಅದನ್ನು ನೋಡಿ ದಿಕ್ಕೆಟ್ಟು ನಿಂತ ಆಂಡ್ರಿಯಾ ಸುಧಾರಿಸಿಕೊಂಡು ಕಾರ್‌ನೊಳಗೆ ಹೋಗಿ ಕೂತಳು. ಟ್ಯಾಕ್ಸಿಯವನು ನಾರ್ವೇಜಿಯನ್‌ನಲ್ಲಿ ಏನೋ ಹೇಳಿ ಕಾರ್ ಓಡಿಸತೊಡಗಿದ.

ಅಸಲಿಗೆ ಆ ಇಂಡಿಯನ್ ಯಾರು? ಆತ ಯಾಕಾಗಿ ತನ್ನೆದುರಿಗೆ ಆಗಾಗ ಬರುತ್ತಾನೆ? ಇಂದೂ ಬರುತ್ತಾನಾ? ಆತ ತನ್ನ ಅಪಾರ್ಟ್‌ಮೆಂಟಿಗೆ ಬಂದ ಕಾರಣವಾದರೂ ಏನು? ಆ ಹಿಮಕರಡಿಯ ಬಳಿಯೂ ಮಾತನಾಡುತ್ತಿದ್ದನಲ್ಲ? ಇವನು ಹುಚ್ಚ ಎನ್ನುವುದೇನೊ ಸರಿ... ಆದರೆ ಯಾಕೆ ಹೀಗೆ? ಇಂಡಿಯನ್ನರು ಹಾವಾಡಿಗರು ಎಂದು ಓದಿದ್ದೇನೆ... ಕರಡಿಯನ್ನೂ ಪಳಗಿಸುವ ಅಸಾಧ್ಯ ಕಲೆ ಅವರಿಗೆ ಸಿದ್ಧಿಸಿದೆಯೇ? ಈ ಪೂರ್ವ ಎನ್ನುವುದು ನಿಜಕ್ಕೂ ಒಂದ್ ಥರ ನಿಗೂಢವೇ!

ಸೋಫಾದಲ್ಲಿ ಕೂತು ಅವನು ಕೂತಿದ್ದ ಜಾಗವನ್ನೇ ನೋಡುತ್ತಾ ಕಾಲಿಂಗ್ ಬೆಲ್ಲಿನ ಸದ್ದಿಗಾಗಿ ಕಾದಳು. ಹೊರ ಹೋಗಿ ಕತ್ತಲಿಗೆ ಕಣ್ಣ ನೆಟ್ಟಳು. ಗಂಟಲು ಇರುಕಿದಂತಾಯ್ತು. ಒಳ ಬಂದು ಟಿ.ವಿ. ನೋಡುತ್ತಾ ಚಳಿಗೂ ಹೆದರದೆ ತೆರೆದೇ ಇಟ್ಟಿದ್ದ ಬಾಗಿಲನ್ನು ಆಗಾಗ ಇಣುಕುತ್ತಿದ್ದಳು. ಅವನು ಕೂತಿದ್ದ ಜಾಗವನ್ನು ಯಾವುದೇ ನಾಚಿಕೆಯಿಲ್ಲದೆ ಮೂಸಿ ನೋಡಿದಳು. ಈ ಹಿಂದೆ ನಾರುತ್ತಿದ್ದ ವಾಸನೆಯ ಕಿಂಚಿತ್ತೂ ಗುರುತಿಲ್ಲದೆ ಅದು ಆವಿಯಾದಂತಿತ್ತು. ಮಂಚದ ಮೇಲೆ ಮಲಗಿ ಕಿವಿಯನ್ನು ಮೈನ್ ಡೋರಿನ ಚಿಲಕಕ್ಕೆ ಅಂಟಿಸಿ ಮಲಗಿದಳು. ಜೋರಾಗಿ ಅಳಬೇಕೆನಿಸಿತು. ಮಗಳನ್ನು ನೋಡಬೇಕೆನಿಸಿ ವಿಡಿಯೋ ಕರೆ ಮಾಡುವ ಎಂದು ಮೊಬೈಲ್ ತಗೆದವಳು ಸಮಯ ನೋಡಿ ನಿಟ್ಟುಸಿರಿಟ್ಟು ಭಾರ ಎದೆಗೆ ಉಸಿರ ತಾಕಿಸಿ ಸಮಾಧಾನಿಸಿದಳು.

ಬೆಳಿಗ್ಗೆ ಎದ್ದಾಗ ಮನಸ್ಸು ಖಾಲಿಖಾಲಿಯೆನಿಸಿತು. ಕಿಚನ್‌ಗೆ ಹೋಗಲೇ ಬೇಸರವಾಯಿತು. ಮಗಳ ಜೊತೆ ಮಾತನಾಡುವಾಗಲೂ ಆತನನ್ನು ನೋಡಬೇಕೆನಿಸಿತು. ಹಸಿವಿನ ತೇಗು ಬಂದಾಗ ಅದರಲ್ಲಿ ಅವನ ವಾಸನೆ ಇದ್ದಂತಾಗಿ ಅಸಹ್ಯವೆನಿಸಿತು. ಕಣ್ಣು ತೆರೆದು ಅಪಾರ್ಟ್‌ಮೆಂಟನ್ನೆಲ್ಲ ನೋಡಿದಳು.

ರಾತ್ರಿ ಪೂರಾ ಇಲ್ಲೇ ಇದ್ದರೂ ತನಗೆ ಒಂಚೂರೂ ತೊಂದರೆ ನೀಡದ ಆತನ ಬಗ್ಗೆ ಹೆಮ್ಮೆಯೆನಿಸಿತು. ಇಂಡಿಯನ್ನರ ಮನಸ್ಸುಗಳು ಸದಾ ಸಮಸ್ಥಿತಿಯಲ್ಲಿರುತ್ತೆ, ನಮ್ಮ ಪಶ್ಚಿಮದವರಂತೆ ಯಾವುದೇ ಸಿಕ್ಕುಗಳಲ್ಲಿ ಅವರುಗಳು ಬಳಲುವುದಿಲ್ಲ ಎಂದು ತನ್ನ ಇಟಾಲಿಯನ್ ಗೆಳತಿಯೊಬ್ಬಳು ಈ ಹಿಂದೆ ಹೇಳಿದ್ದು ನಿಜ... ಅಥವ ಟಾಲ್‌ಸ್ಟಾಯ್ ಹೇಳುವಂತೆ ಇಂಡಿಯನ್ನರೆಲ್ಲ ಅಧ್ಯಾತ್ಮದ ಮನಸ್ಸುಳ್ಳವರೇ? ಇಹ ಲೋಕದ ಆಸೆ ದುಃಖಗಳಿಗೆ ಬಲಿಯಾಗದ ಸ್ಥಿತಪ್ರಜ್ಞೆಯುಳ್ಳವರೇ? ಬುದ್ಧ... ಹಾಂ ಮರೆತಿದ್ದೆ... ಬುದ್ಧನೂ ಇಂಡಿಯಾದವನು ತಾನೇ... ಸ್ಟೀವ್ ಜಾಬ್ ಬುದ್ಧಿಸಂಗೆ ಮತಾಂತರ ಹೊಂದಿದ ಎಂದು ಓದಿದ್ದೆ... ಈತ ಬುದ್ಧನೇ? ಅಥವಾ ಹುಚ್ಚನೇ?

ನೀಳ, ಕಿರಿದಾದ, ಕಡಿದಾದ ರಸ್ತೆಗಳಲ್ಲಿ ಅಲೆದಾಡುತ್ತಾ ಇಲ್ಲಿಯ ಇಪ್ಪತ್ನಾಲ್ಕು ಗಂಟೆಗಳ ಕತ್ತಲನ್ನು ಮನಸಾರೆ ಬೈದಳು. ಅಪಾರ್ಟ್‌ಮೆಂಟಿಗೆ ಬಂದು ಗೆಳತಿಯೊಂದಿಗೆಯೂ ಮಗಳೊಂದಿಗೆಯೂ ಮಾತನಾಡುತ್ತಾ ಸುಸ್ತಾಗಿ ಮಲಗುತ್ತಿದ್ದಳು. ಶಾಲೆಯ ಕೆಲಸಗಳು ನೆನಪಾಗಿ ಕೋಪ ಉಕ್ಕುಕ್ಕಿ ಬರುತ್ತಿತ್ತು. ಈ ಜೀವನವೇ ಬೇಡ ಅನ್ನಿಸಿತು. ಮಗಳನ್ನು ಅವಳ ತಂದೆಯ ಬಳಿ ಬಿಟ್ಟು ತಾನು ಯಾವುದಾದರೂ ಹೊಸ ದೇಶವೊಂದಕ್ಕೆ ಹೋಗಿ ಹೀಗೆ ಅನಾಮಿಕಳಾಗಿ ಬದುಕುತ್ತಾ ಸಾಯುವವರೆಗೂ ಅಲ್ಲಿಯೇ ಇದ್ದುಬಿಡೋಣವೇ ಎಂದುಕೊಂಡಳು.

ಅಂದು ಹೊರಗೆ ಹೋಗಿದ್ದವಳು ಅಪಾರ್ಟ್‌ಮೆಂಟಿನೊಳಗೆ ಬಂದಾಗ ಸಂಜೆ ಆರು ಗಂಟೆ. ಬಸವಳಿದಿದ್ದಳು. ನೇರ ಬೆಡ್‌ರೂಮಿಗೆ ಹೋಗಿ ಮಲಗಿದಳು. ಉಸಿರು ಒಳ ಎಳೆದುಕೊಂಡು ಮೆಲ್ಲಗೆ ಹೊರ ಹಾಕಿದಳು. ಕಣ್ಣು ತೆರೆದಳು.

ಅವಳ ಮುಂದೆ ಒಬ್ಬ ಹೆಂಗಸು... ನಾರ್ವೇಜಿಯನ್ ಭಾಷೆಯಲ್ಲಿ ಏನೋ ಹೇಳುತ್ತಿದ್ದಾಳೆ. ಕೈಕಾಲು ದೇಹಗಳ ಅಲ್ಲಾಡಿಸುತ್ತಾ ಏನೋ ಜೋರು ಧ್ವನಿಯಲ್ಲಿ ಮಾತನಾಡುತ್ತಿದ್ದಳು. ಯಾರಿಗೋ ಕರೆ ಮಾಡಿ ಮೊಬೈಲ್‌ನಲ್ಲಿ ಕಿರುಚಾಡುತ್ತಿದ್ದಳು. ಕಿಚನ್‌ಗೆ ಹೋಗಿ ಕಾಫಿ ಮಾಡಿಕೊಂಡು ಬಂದ ಆಂಡ್ರಿಯಾ ಸೋಫಾದಲ್ಲಿ ಕೂತು ಮೆಲ್ಲಗೆ ಕುಡಿಯತೊಡಗಿದಳು. ಹಾಲ್‌ನಲ್ಲಿದ್ದ ಟಿ.ವಿ. ಎಲ್ಲಿ ಹೋಯಿತೆಂದು ಗಲಿಬಿಲಿಗೊಂಡು ಆ ಮನೆಯ ಕೋಣೆಗಳೊಳಗೆಲ್ಲಾ ಹುಡುಕುತ್ತಿದ್ದಳು. ಆ ಹೆಂಗಸು ಇವಳ ಹಿಂದೆ ಓಡುತ್ತಾ ಕೂಗಾಡಲು ಶುರುಮಾಡಿದಳು.

ಪ್ರತಿಕ್ರಿಯಿಸಿ: **feedback@sudha.co.in**